ನೆಲೆಯೂರಬೇಕೆಂಬ ಉದ್ದೇಶದಿಂದ ಕನ್ನಡ ಹಾಗೂ ಪ್ರಾದೇಶಿಕ ಭಾಷಾ ಚಲನಚಿತ್ರಗಳಿಗೆ ಸಹಾಯದನ ನೀಡುವ ಪದ್ಧತಿಯನ್ನು ಜಾರಿಗೆ ತರಲಾಯಿತು.

3) 178 ಚಿತ್ರಗಳು.

ವಿಷಯ:- ವೈದ್ಯರು ಹಾಗೂ ಪಶುವೈದ್ಯರ ವೇತನದಲ್ಲಿರುವ ತಾರತಮ್ಯ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 635 (1275)

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೈದ್ಯರು ಮತ್ತು ಪಶುವೈದ್ಯರ ವೇತನಗಳಲ್ಲಿ ತಾರತಮ್ಯವಿರುವುದು ನಿಜವೇ? ಹಾಗಿದ್ದಲ್ಲಿ ತಾರತಮ್ಯ ನಿವಾರಣೆ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಆ) 25 ವರ್ಷಗಳಿಂದ ಒಂದೇ ಹುದ್ದೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಪಶುವೈದ್ಯಾಧಿಕಾರಿಗಳಿಗೆ ಇನ್ನೂ ಮುಂಬಡ್ತಿ ದೊರೆಯದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಬಿ.ಬಿ.ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು):-

ಅ) ಹೌದು. ಈ ಎರಡೂ ಹುದ್ದೆಗಳು ಒಂದೇ ಹೋಲಿಕೆಯವುಗಳು ಆಗಿರುವುದಿಲ್ಲವಾದ್ದರಿಂದ ಯಾವುದೇ ಕ್ರಮಕೈಗೊಳ್ಳುವ ಅಗತ್ಯತೆ ಇರುವುದಿಲ್ಲ.

ಆ) ಬಂದಿದೆ. ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ ಚಾಲ್ತಿಯಲ್ಲಿರುವ 1991ರ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ, ಪಶುವೈದ್ಯ ಅಧಿಕಾರಿಗಳ ವೃಂದ ಬಲ 716 ಮತ್ತು ಸಹಾಯಕ ನಿರ್ದೇಶಕರುಗಳ ವೃಂದ ಬಲ 394. 1991ರಿಂದ ಈಚೆಗೆ ಹಲವಾರು ಹೊಸ ಪಶುಚಿಕಿತ್ಸಾಲಯಗಳನ್ನು ತೆರೆದಿದ್ದು, ಸದರಿ ಪಶುಚಿಕಿತ್ಸಾಲಯಗಳಿಗೆ ಹೊಸ ಹುದ್ದೆಗಳನ್ನು ಸೃಜಿಸಲಾಗಿದೆ. ಈಗ ಇಲಾಖೆಯಲ್ಲಿ 1045 ಪಶುವೈದ್ಯಾಧಿಕಾರಿಗಳು ಮತ್ತು 445 ಸಹಾಯಕ ನಿರ್ದೇಶಕರ ಹುದ್ದೆಗಳು ಇವೆ. ಸಹಾಯಕ ನಿರ್ದೇಶಕರ ಹುದ್ದೆಗಳನ್ನು ನೇರ ನೇಮಕಾತಿ ಮತ್ತು ಮುಂಬಡ್ತಿ ಮೂಲಕ ತುಂಬಲಾಗುತ್ತಿದೆ. ನೇರ ನೇಮಕಾತಿಯಿಂದ ತುಂಬಬೇಕಾದ ಸಹಾಯಕ ನಿರ್ದೇಶಕರ 153 ಹುದ್ದೆಗಳನ್ನು 1991ರಿಂದ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ - 32ರಡಿಯಲ್ಲಿ ಸ್ವತಂತ್ರ ಪ್ರಭಾರೆಯ ಮೇಲೆ ಪಶುವೈದ್ಯಾಧಿಕಾರಿಗಳನ್ನು ನೇಮಿಸಲಾಗಿದೆ. ಇಲಾಖೆಯಲ್ಲಿ ದೀರ್ಘ ಕಾಲ ಸೇವೆ ಸಲ್ಲಿಸುತ್ತಿರುವ ಪಶುವೈದ್ಯಾಧಿಕಾರಿಗಳಿಗೆ ನಿಯಮಾನುಸಾರ ಮುಂಬಡ್ತಿ ನೀಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.